



ಜೆಸಿಬಿ ಪ್ರಶಸ್ತಿಯೊಂದಿಗೆ ಕಾದಂಬರಿಕಾರ ಬೆನ್ಯಾಮಿನ್

ಹೊಂದಿದ್ದರೂ ದೇಶವಾಳುವ ಅಧಿಕಾರ ಸುನ್ನಿ ಜನಾಂಗದವರ ಹಿಡಿತದಲ್ಲಿಯೇ ಇದೆ. ಸುನ್ನಿ ಧರ್ಮವೇ ರಾಜಕೀಯ ಧರ್ಮವೂ ಆಗಿದೆ. ಆದ್ದರಿಂದ ಶಿಯಾ ಜನರನ್ನು ದ್ವಿತೀಯ ದರ್ಜೆಯ ಪ್ರಜೆಗಳಂತೆ ನೋಡಿಕೊಳ್ಳಲಾಗುತ್ತದೆ. ಈ ಅಸಮಾನತೆಯನ್ನು ಪ್ರಶ್ನಿಸಲು ಹೊರಟ ಬಹುತೇಕ ಜನರನ್ನು ಸುನ್ನಿ ರಾಜಕೀಯ ಶಕ್ತಿಗಳು ಹೊಸಕಿ ಹಾಕಿ ಬಿಡುತ್ತವೆ. ಈ ದೌರ್ಜನ್ಯವನ್ನು ಪ್ರಶ್ನಿಸಿ ಶಿಯಾ ಜನಾಂಗವು ದಂಗೆ ಏಳುವ ಕಥನವೇ ಈ ಕಾದಂಬರಿಯ ತಿರುಳು. ಬಹುತೇಕ ಭಾರತೀಯ ಓದುಗರಿಗೆ ಅಪರಿಚಿತವಾಗಿರುವ ಈ ವಸ್ತುವನ್ನು ಲೇಖಕರು ದಟ್ಟವಾಗಿ ಕಟ್ಟಿಕೊಟ್ಟಿರುವುದರಲ್ಲಿ ಈ ಕಾದಂಬರಿಯ ಮಹತ್ವವಿದೆ.

ಕಥೆ ಕೇವಲ ಸುನ್ನಿ ಮತ್ತು ಶಿಯಾ ಜನರ ಸಂಘರ್ಷಕ್ಕೆ ಸೀಮಿತವಾಗಿಲ್ಲ. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ – ಮುಂತಾದ ಬಡ ರಾಷ್ಟ್ರಗಳಿಂದಲೂ ಜನರು ಕೆಲಸ ಹುಡುಕಿಕೊಂಡು ಈ ದೇಶಕ್ಕೆ ವಲಸೆ ಹೋಗಿದ್ದಾರೆ. ಸಹಜವಾಗಿಯೇ ಇವರು ರಾಜಕೀಯ ಶಕ್ತಿಯಿರುವ ಸುನ್ನಿ ಜನರಿಗೆ ವಿಧೇಯರಾಗಿ ಬದುಕನ್ನು ಸಾಗಿಸುತ್ತಿದ್ದಾರೆ. ಅತ್ಯಂತ ಕಡಿಮೆ ಸಂಬಳಕ್ಕೆ ಕೆಲಸ ಮಾಡುವ ಇವರ ಮೇಲೆ ಶಿಯಾ ಜನಾಂಗಕ್ಕೆ ಸಿಟ್ಟಿದೆ. ತಮ್ಮ ಕೆಲಸಗಳನ್ನೆಲ್ಲಾ ಇವರು ಕಿತ್ತುಕೊಂಡಿದ್ದಾರೆ ಎಂದು ಅವರು ಆರೋಪಿಸುತ್ತಾರೆ. ಆದ್ದರಿಂದಲೇ ಸಂಘರ್ಷದ ಬಿಸಿ ಈ ಮೂರನೆಯವರಿಗೂ ದಟ್ಟವಾಗಿ ತಾಕುತ್ತದೆ. ಅಂತಹ ಪಾಕಿಸ್ತಾನಿ ಹೆಣ್ಣುಮಗಳ ಕಣ್ಣಿಂದಲೇ ಈ ಕಥನ ನಿರೂಪಿತವಾಗಿದೆ.

ಬಡತನವೆನ್ನುವುದು ಸಾಪೇಕ್ಷವಾದದ್ದು ಎಂದು ಶಿಯಾ ಜನಾಂಗದ ನಾಯಕನೊಬ್ಬ ಆರೋಪಿಸುತ್ತಾನೆ. ಭಾರತೀಯ ಮತ್ತು ಪಾಕಿಸ್ತಾನದಂತಹ ಬಡ ರಾಷ್ಟ್ರಗಳಿಂದ ಅಲ್ಲಿಗೆ ಹೋದವರಿಗೆ, ಶಿಯಾ ಜನಾಂಗದ ಸಮಸ್ಯೆಯೇನೆಂದೇ ಅರ್ಥವಾಗುವುದಿಲ್ಲ. ಒಳ್ಳೆಯ ಕೆಲಸವಿದೆ, ಸೊಗಸಾದ ಸಂಬಳವಿದೆ, ಶಿಕ್ಷಣ ಆರೋಗ್ಯ ಎಲ್ಲವನ್ನೂ ಸರಕಾರ ನೋಡಿಕೊಳ್ಳುತ್ತದೆ; ಹಾಗಿದ್ದರೂ ಕ್ರಾಂತಿ ಮಾಡುತ್ತೇವೆಂದರೆ ಅದಕ್ಕೆ ಅರ್ಥವಿದೆಯೆ? ಎಂಬುದು ಈ ವಲಸಿಗರ ಪ್ರಶ್ನೆ. ಈ ತರ್ಕವನ್ನು ಸುತಾರಾಂ